

ಕನ್ನಡದಲ್ಲಿ ನಿಷ್ಣಾತಿಯನ್ನು ಗಳಿಸಿದರು. ಎಂ.ಎ ಮುಗಿದ ನಂತರದಲ್ಲಿ ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ನೆಲೆಗೊಳ್ಳುವುದಕ್ಕಿಂತ ಮುಂಚೆ (1968) ನಾಲ್ಕು ವರ್ಷಗಳ ಕಾಲ ಬೇರೆ ಬೇರೆ ಊರುಗಳಲ್ಲಿ ಪ್ರೌಢಶಾಲೆ ಮತ್ತು ಪ್ರಥಮದರ್ಜೆ ಕಾಲೇಜುಗಳಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿದ್ದಾರೆ. ವಿಜಯಾ ಕಾಲೇಜಿನಲ್ಲಿ 32 ವರ್ಷಗಳಷ್ಟು ಸುದೀರ್ಘ ಕಾಲ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ 2000ರಲ್ಲಿ ನಿವೃತ್ತರಾದರು. 1968ರಿಂದ ಕೊನೆಯವರೆಗೂ, ಸರಿಸುಮಾರು ಅರುವತ್ತು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆನಿಂತು ಸಾಹಿತ್ಯಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ನಾರಾಯಣ ಅವರದು ವಿದ್ಯೆ, ಪಾಂಡಿತ್ಯಗಳಿಗೆ ಹೆಸರಾದ ಮನೆತನ. ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಸುಮಾರು ಹತ್ತುಸಾವಿರ ವಾರ್ಧಕ ಷಟ್ಪದಿಗಳನ್ನೊಳಗೊಂಡ ‘ಶ್ರೀರಾಮಕಥಾಮೃತ’ ಎಂಬ ರಾಮಾಯಣ ಕಾವ್ಯವೇ ಅಲ್ಲದೆ ಹಲವಾರು ಕನ್ನಡ-ಸಂಸ್ಕೃತ ಕೃತಿಗಳ ಕರ್ತೃವೆಂದು ಖ್ಯಾತನಾದ, ಅದ್ವಿತೀಯ ವಿದ್ವಾಂಸ, ಕವಿ ವೆಂಕಾಮಾತ್ಯ ಈ ವಂಶದ ಪ್ರಸಿದ್ಧ ವ್ಯಕ್ತಿ. ಹೈದರಾಲಿಯ ಆಸ್ಥಾನದಲ್ಲಿ ಮಂತ್ರಿ (ಪ್ರಧಾನ್) ಆಗಿದ್ದ ಕಾರಣದಿಂದ ‘ಅಮಾತ್ಯ’ ಎಂಬುದು ಅವರ ಹೆಸರಿನ ಜೊತೆ ಅವಿಭಾಜ್ಯವಾಗಿ ಸೇರಿಕೊಂಡಿತು. ಆ ಕಾರಣಕ್ಕಾಗಿಯೇ ಆ ಮನೆತನಕ್ಕೆ ಸೇರಿದವರೆಲ್ಲ ತಮ್ಮ ಹೆಸರಿನ ಮೊದಲಿಗೆ ಪ್ರಧಾನ್ ಅಥವಾ ಪಿ. ಅಕ್ಷರವನ್ನು ಸೇರಿಸಿಕೊಳ್ಳುವುದು ರೂಢಿ. ವೆಂಕಾಮಾತ್ಯನ ಪ್ರಧಾನಿ ಪದವಿ ತಮ್ಮದಾಗದಿದ್ದರೂ ಅವನ ಪಾಂಡಿತ್ಯ ಪ್ರತಿಭೆಗಳ